ಈ ರಾಷ್ಟ್ರೀಯ ವಿಸ್ತರಣಾ ಯೋಜನೆ ಬಹಳ ಮುಖ್ಯವಾದದ್ದು ಎಂದು ಮೂರು ವರ್ಷಗಳಿಂದ ಕೇಳುತ್ತಿದ್ದೇವೆ. ಅದುವರಿಂದ ಈ ಮೂರು ತಾಲ್ಲೂಕುಗಳಲ್ಲಿ ಯಾವುದಾದರೂ ಒಂದೆರಡು ತಾಲ್ಲೂಕುಗಳಲ್ಲಿಯಾದರೂ ಈ ಕೇಂದ್ರಗಳನ್ನು ಸ್ಥಾಪನೆಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಈಗ ಮಲೆನಾಡು ಮತ್ತು ಮೈದಾನ ಪ್ರದೇಶಗಳಲ್ಲಿ ಬೇರೆ ವಾತಾವರಣ ವಿದೆ. ಅಷ್ಟೇ ಹೊರತು ಹದಗೆಟ್ಟಿದೆ ಎಂದು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಇಡೀ ಮೈಸೂರು ದೇಶದಲ್ಲಿರುವ ಎಲ್ಲ ತಾಲ್ಲೂಕುಗಳನ್ನೂ ತೆಗೆದುಕೊಳ್ಳಬೇಕೆಂದು ಏರ್ಪಾಡು ಮಾಡಿಕೊಂಡಿದ್ದೇವೆ. ತಾವು ಹೇಳಿರುವ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡು ಮುಂದಿನ ವರ್ಷ ಯೋಚನೆ ಮಾಡುತ್ತೇವೆ.

ಶ್ರೀ ಹೆಚ್. ಕೆ. ಸಿದ್ದಯ್ಯ.—ಜ್ಞಾಪಕದಲ್ಲಿಟ್ಟುಕೊಂಡು ಯೋಚನೆ ಮಾಡುತ್ತೀವೆಂದರೆ ನಮ್ಮ ಕೆಲಸ ವಾಗಲಿಲ್ಲ. ತಾವು ಖಂಡಿತವಾಗಿಯೂ ಆಲೂರು, ಬೇಲೂರು, ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಯಾವುದನ್ನಾದರೂ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡಬೇಕು.

Mr. SPEAKER.—That is no question.

ಶ್ರೀ ಎಚ್. ಕೆ. ಸಿದ್ದಯ್ಯ.—ಈ ರಾಷ್ಟ್ರೀಯ ವಿಸ್ತರಣೆ ಯೋಜನೆಯನ್ನು ಮುಂದಿನವರ್ಷ ನಮ್ಮ ತಾಲ್ಲೂಕುಗಳಿಗೆ ಕೊಡುವ ಯೋಚನೆ ಸರ್ಕಾರಕ್ಕೆ ಇದೆ ಎಂದು ನಾನು ನಂಬಬೇ ?

ಡಾ॥ ಆರ್. ನಾಗನಗೌಡ.—ಈ ವರ್ಷದಲ್ಲಿ ಮೈಸೂರು ದೇಶದಲ್ಲಿ ಎಲ್ಲ ತಾಲ್ಲೂಕುಗಳಿಗೂ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಕೊಡುವಾಗ ಈ ತಾಲ್ಲೂಕುಗಳನ್ನೂ ಗಮನದಲ್ಲಿಟ್ಟುಕೊಂಡು ಯಾವುಯಾವುದಕ್ಕೆ ಕೊಡಬೇಕು ಎಂದು ತೀರ್ಮಾನ ಮಾಡುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಮೂರು ವರ್ಷಗಳಿಂದಲೂ ತಮ್ಮನ್ನು ಬೇಡಿಕೊಳ್ಳುತ್ತಿರುವ ನಮಗೆ ಈ ಸಲ ಈ ಯೋಜನೆಯ ಅನುಕೂಲ ದೊರೆಯುತ್ತದೆ ಎಂದು ನಂಬಬೇ ?

ಡಾ॥ ಆರ್. ನಾಗನಗೌಡ.—ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದೇವೆ.

1 P.M.

ಶ್ರೀ ಬಿ. ಎಚ್. ಬೋರಣ್ಣಗೌಡ.—ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಹಾಸನ ಡಿಸ್ಟ್ರಿಕ್ಟಿನಲ್ಲಿ ಪ್ರಾರಂಭವಾಗುವಾಗ ಸಕಲೇಶಪುರ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ಪ್ರಾರಂಭ ಮಾಡಬೇಕೆಂದು ಶಿಫಾರ್ಸು ಮಾಡಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಆ ಸಮಾಚಾರ ಈಗ ನನ್ನಲ್ಲಿಲ್ಲ. ಮೊದಲು ಅಂದರೆ ಯಾವಾಗ ಎಂದು ಹೇಳಿದರೆ ವಿಚಾರ ಮಾಡಬಹುದು.

ಶ್ರೀ ಬಿ. ಎಚ್. ಬೋರಣ್ಣಗೌಡ.—ಇದುವರೆಗೆ ಆ ತಾಲ್ಲೂಕುಗಳಿಗೆ ಕೊಡದಿರುವುದರಿಂದ ಮುಂದಾದರೂ ಕೊಡಲು ಯೋಚನೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಎಲ್ಲ ಸಂದರ್ಭಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ಅದನ್ನು ವಿಚಾರ ಮಾಡಿ ಯಾವ ತಾಲ್ಲೂಕುಗಳಿಗೆ ಕೊಡಬೇಕೆಂಬುದನ್ನು ತೀರ್ಮಾನ ಮಾಡುತ್ತೇವೆ.

QUESTIONS FOR ANSWERS ON THE DAY

(But not taken up).

Technical School for Tumkur.

Q.—275. Sri Mali MARIYAPPA (Pavagada).—

Will the Government be pleased to state :—

(*a*) whether there have been representations to locate a technical school at Tumkur ?

(*b*) the progress so far made by Government to fulfil the said request of Tumkur people ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) Public support backing up their request is awaited and the inclusion of in the Second Five-Year Plan is under consideration.

N. E. S. Blocks for Pavagada.

Q.—278. Sri Mali MARIYAPPA (Pavagada).—

Will the Government be pleased to state :—

(*a*) whether Pavagada taluk raiyats have repeatedly requested for opening of N.E.S. Block at Pavagada ;

(*b*) whether they are prepared to concede the same this year in view of the peculiar circumstances of the said taluk ?

A.—Dr. R. NAGAN GOWDA (Minister for Agriculture).—

(*a*) Yes.

(*b*) The request is kept in view.

PANEL OF CHAIRMEN.

Mr. SPEAKER.—Under Rule 6 of the Rules of Procedure and Conduct of Business in the Mysore Legislative Assembly the following members will

(MR. SPEAKER.)

form the Panel of Chairmen for this Session.—

Sriyuts—

1. B. C. Nanjundaiya
2. K. Pattabhiraman
3. G. Duggappa
4. A. V. Narasimha Reddy

PAPERS LAID ON THE TABLE

Sri K. HANUMANTHAIYA (Chief Minister).—Sir, I beg to lay on the Table The Appropriation Accounts, 1953-54 and the Audit Report 1955 and the Finance Accounts 1953-54 and the Audit Report 1954.

Sri H. SIDDAVEERAPPA (Minister for Home).—Sir, I beg to lay on the Table copies of Notifications Nos.—

T. 8412—R. T. 35-55-15 dated 13th February 1956,
T. 8465—R. T. 162-55-5 dated 14th February 1956,

issued under the Motor Vehicles Act 1939 and Notifications Nos.—

T. 7831—R.T. 17-55-68 dated 19th January 1956,
T. 8451—R.T. 7-55-72 dated 14th February 1956,

issued under the Mysore Motor Vehicles Taxation and Tolls Act 1951.

Sri H. M. CHANNABASAPPA (Minister for Industries).—Sir, I lay on the Table of the House the Mysore Alienated Villages (Protection of Tenants and Miscellaneous Provisions) Amendment Ordinance, 1955, (Mysore Ordinance II of 1955) in pursuance of Article 213 (1) of the Constitution.

CONDOLENCE REFERENCE.

Re: **Dem'se of Sri T. C. Basappa.**

ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಸ್ಪೀಕರ್ ಸ್ವಾಮಿ, ಕಳೆದ ಸಲ ಈ ಸಭೆ ಸೇರಿದನಂತರ ಒಂದು ವ್ಯಸನಕರವಾದ ಸಂಗತಿಯು ನಡೆದಿದೆ. ಈ ಸಭೆಯ ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ಸಿ. ಬಸಪ್ಪನವರು ದೈವಾಧೀನರಾಗಿದ್ದಾರೆ. ಅವರು ಬಹಳ ಕಾಲದಿಂದ ದೇಶ ಸೇವೆಯಲ್ಲಿ ನಿರತರಾಗಿದ್ದರು. ನನಗೆ ಅವರನ್ನು ಕಳೆದು ಕೊಂಡುದು ಒಬ್ಬ ದೊಡ್ಡ ಸ್ನೇಹಿತರನ್ನು ಕಳೆದು ಕೊಂಡಹಾಗಾಗಿದೆ. ಅವರೂ ನಾನೂ ಸಹ ಶಿಕ್ಷಣ ಪಡೆದುದು ಒಂದೇಕಾಲದಲ್ಲ. ವಿದ್ಯಾರ್ಥಿ ದೆಸೆ ಮುಗಿದಮೇಲೆ ಅವರು ಕಾಂಗ್ರೆಸ್ ಸಂಸ್ಥೆಗೆ ಸೇರಿ ಬಹಳವಾಗಿ ದುಡಿದಿದ್ದಾರೆ. ಈ ಪ್ರಾಂತದಲ್ಲಿ ಕಾಂಗ್ರೆಸ್ ಸಂಸ್ಥೆ ಬೆಳೆಯುವುದಕ್ಕೂ ಅದು ಪರಿಣಾಮಕಾರಿಯಾಗುವುದಕ್ಕೂ ಕೆಲಸ ಮಾಡಿ ಕೈಲಾದ ಸೇವೆಯನ್ನು ಅವರು ಸಲ್ಲಿಸಿದ್ದಾರೆ. ಇದಲ್ಲದೆ ಶಾಸನ ಸಭೆಯ ಸದಸ್ಯರಾಗಿ ಬಹಳ ಕಾಲದಿಂದಲೂ ದೇಶದ ಸೇವೆಯನ್ನು ಸಮರ್ಪಕವಾಗಿ ಅವರು ಮಾಡಿದರು. ಮುನಿಸಿಪಾಲಿಟಿ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳಲ್ಲೂ ಕೂಡ ಅವರು ಸದಸ್ಯರಾಗಿ ಎಲ್ಲರ ಮೆಚ್ಚುಗೆಗೂ ಪಾತ್ರರಾಗುವಂತೆ ಕೆಲಸ ಮಾಡಿದರು. ಅವರು ಇನ್ನೂ ಹೆಚ್ಚು ಸಮರ್ಥರಾಗಿದ್ದರು. ಹೆಚ್ಚುಕಾಲ ಅವರು ಬದುಕಿದ್ದರೆ ಈ ದೇಶಕ್ಕೆ ಅವರ ಸೇವೆ ಇನ್ನೂ ಹೆಚ್ಚಾಗಿ ಸಲ್ಲಬಹುದಾಗಿತ್ತು. ದೈವ ನಿಯಾಮಕದಂತೆ ಅವರು ಅಕಾಲ ಮರಣಕ್ಕೆ ತುತ್ತಾದುದರಿಂದ ನಾವು ಬಹಳ ದುಃಖಕ್ಕೆ ಈಡಾಗಿದ್ದೇವೆ. ದೇವರು ಅವರ ಆತ್ಮಕ್ಕೆ ಸದ್ಗತಿಯನ್ನು ಕೊಡಲೆಂದು ನಾನು ಸಭೆಯ ಪರವಾಗಿ ಪ್ರಾರ್ಥಿಸಿ ತಾವು ಸಭೆಯ ಸಂತಾಪವನ್ನು ಅವರ ಕುಟುಂಬದವರಿಗೆ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

*Sri J. MOHAMED IMAM (Jagalur).—I associate myself with the Leader of the House in paying my tributes to the memory of late Sri T. C. Basappa who did yeoman service to the country. He was a good friend and a great patriot and served the country in various capacities. I offer on behalf of my Party my condolences and the condolences of this House may be conveyed to the members of the bereaved family.

Mr. SPEAKER.—The Chair associates itself with the feelings expressed by the Hon'ble the Leader of the House and the Leader of the Opposition. I can only say this much and that is, we have lost a good friend and a great patriot.

*Sri T. MARIAPPA (Mysore City North).—May I also bring to the notice of this House of the demise of Sri B. Mari Gowda of Chendgal, a member of the Representative Assembly, and suggest that condolences of this House might be conveyed to the members of the bereaved family?

Sri K. HANUMANTHAIYA.—That may also be included.

Mr. SPEAKER.—Yes. Now the House will stand and observe silence for two minutes.

(*The House stood up and observed silence for two minutes*).